ವಿಜಯ ಕರ್ನಾಟಕ

**Friday, September 9, 2011**

# ತನ್ವಿ ಸಿಂಗ್ಲಾಗೆ ಗೌರವ

ದಕ್ಷಿಣ ಕೊರಿಯಾದಲ್ಲಿ ನಡೆದ ಸೌಂದರ್ಯ ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸಿ 2011ರ ಮಿಸ್ ಏಷ್ಯಾ ಪೆಸಿಫಿಕ್ ವಿಶ್ವ ಭಾರತಿ ಕಿರೀಟವನ್ನು ಪಡೆದ ತನ್ವಿ ಸಿಂಗ್ಲಾ ಅವರನ್ನು ಇತ್ತೀಚೆಗೆ ಜೈನ್ ವಿ.ವಿದ್ಯಾಲಯ ಗೌರವಿಸಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ತನ್ವಿಸಿಂಗ್ಲಾ ವೈಯಕ್ತಿಕವಾಗಿ ಶಿಕ್ಷಣದ ಮೇಲಿನ ಆಸಕ್ತಿ ಮತ್ತು ಮಾಡೆಲಿಂಗ್ ಈ ಎರಡೂ ಸಮತೋಲನವಾಗಿ ನೆರವಾದವು ಹಾಗೂ ಜೈನ್ ವಿಶ್ವ ವಿದ್ಯಾಲಯದ ಅಧ್ಯಕ್ಷರು ಮತ್ತು ಶಿಕ್ಷಕರ ಪ್ರೋತ್ಸಾಹದಿಂದ ಮಿಸ್ ಏಷ್ಯಾ ಪೆಸಿಫಿಕ್ ವಿಶ್ವ ಭಾರತ ಕಿರೀಟ ಪಡೆಯಲು ಸಹಾಯವಾಯಿತು ಎಂದರು. ಜೈನ್ ವಿಶ್ವ ವಿದ್ಯಾಲಯದ ಅಧ್ಯಕ್ಷ ಆರ್.ಚನ್ನರಾಜ್ ಜೈನ್, ಜೈನ್ ವಿ.ವಿ ನಿರ್ದೇಶಕ .ಬಿ.ಟಿ.ವೆಂಕಟೇಶ್, ಜೈನ್ ವಿ.ವಿ ಡೀನ್ ಡಾ. ಈಶ್ವರ್ ಅಯ್ಯರ್, ವಿ.ವಿದ್ಯಾಲಯದ ಸಿಬ್ಬಂದಿ ಹಾಜರಿದ್ದರು.